IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಪ್ರವಾಸಕಥನಗಳ ಅವಶ್ಯಕತೆ

**ಶಿವಪ್ರಸಾದ ಕೆ.ಎನ್**
ಸಂಶೋಧನಾ ವಿದ್ಯಾರ್ಥಿ
ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ಬೆಂಗಳೂರು.

**ಡಾ.ಕೆ. ಮಲರ್‌ವಿಳಿ**
ಕನ್ನಡ ಪ್ರಾಧ್ಯಾಪಕರು
ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ಬೆಂಗಳೂರು

'ಬದಲಾವಣೆ ಜಗದ ನಿಯಮ'ವೆಂಬ ನಾಣ್ಣುಡಿಯು ಇತ್ತೀಚೆಗೆ ಕೇಳಿಬರುತ್ತಿರುವಂತೆ ಇಂದು ಪ್ರತಿಯೊಂದು ಪ್ರದೇಶವು ಕೂಡ ಕಾಲ ಬೆಳೆದಂತೆ ಬದಲಾವಣೆಯಾಗುತ್ತಿರುತ್ತದೆ. ಅದು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ವೈಜ್ಞಾನಿಕವಾಗಿ, ತಾಂತ್ರಿಕವಾಗಿ, ಇತ್ಯಾದಿ ಹಲವು ರೀತಿಯ ಬದಲಾವಣೆಗೆ ಸಮಾಜ ಒಳಗಾಗುತ್ತಿದೆ. ಎಲ್ಲವೂ ಸಹ ಡಿಜಿಟಲ್ ವ್ಯವಸ್ಥೆಗೆ ಒಳಗಾಗುತ್ತಿರುವುದು ಒಂದು ದೊಡ್ಡ ಬದಲಾವಣೆಯಾಗಿದೆ. ಕ್ಷಣಾರ್ಧದಲ್ಲಿ ಕುಳಿತಲ್ಲಿಂದಲೇ ಬೇಕಾದ ಮಾಹಿತಿಯನ್ನು ಇಂದು ತಂತ್ರಜ್ಞಾನಗಳು ಒದಗಿಸುತ್ತಿವೆ. ಆದ ಕಾರಣ ಇಂದು ಮಾನವ ಜನಾಂಗ ಶ್ರಮದಿಂದ ದುಡಿಯದೇ ಕೇವಲ ಬುದ್ಧಿಶಕ್ತಿಯಿಂದ ಕೆಲಸ ನಿರ್ವಹಿಸಿ ಆಧುನೀಕತೆಯತ್ತ ಹೆಜ್ಜೆ ಹಾಕುತ್ತಿದೆ. ಈ ತಂತ್ರಜ್ಞಾನದ ಸಹಾಯದಿಂದ ಮಾಹಿತಿ ತಂತ್ರಜ್ಞಾನ ಎಂಬ ಪರಿಭಾಷೆ ಹುಟ್ಟಿಕೊಂಡು ಪ್ರತಿಯೊಬ್ಬನಿಗೂ ಬೇಕಾದ ಮಾಹಿತಿಯನ್ನು ಇಂದು ಗೂಗಲ್‌ನ ಸಹಾಯದಿಂದ ಪಡೆಯುವ ವ್ಯವಸ್ಥೆಯಿರುವುದು ಕಂಡುಬರುತ್ತದೆ. ಇದು ಆರೋಗ್ಯಕರವಾದ ಸಂಗತಿಯಾದರೂ ಕೂಡ ಮಾನವನ ಮೆದುಳಿನ ನೆನಪಿನ ಶಕ್ತಿಯನ್ನು, ಅವನ ಚಲನಶೀಲತೆಯನ್ನು ಕುಂದಿಸುತ್ತಿರುವುದು ಕಂಡುಬರುತ್ತದೆ.

ಈ ಮಾಹಿತಿ ತಂತ್ರಜ್ಞಾನದಿಂದಾಗಿ ಇಂದು ಇಡೀ ಪ್ರಪಂಚದ ವಿಚಾರಗಳನ್ನು ಕುಳಿತಲ್ಲಿಂದಲೇ ನೋಡುವ ವ್ಯವಸ್ಥೆಯಿದೆ. ನಾವು ಇಂದು ಯಾವುದೇ ಶ್ರಮವಿಲ್ಲದೇ ಕಂಪ್ಯೂಟರ್ ಮತ್ತು ಅದಕ್ಕೆ ಜೋಡಿಸಿರುವ ಇಂಟರ್‌ನೆಟ್‌ನ ಸಹಾಯದಿಂದಾಗಿ ಪ್ರಪಂಚದ ಪ್ರಸಿದ್ದ ಸ್ಥಳಗಳನ್ನು ಅಲ್ಲಿನ ಜನಜೀವನಗಳನ್ನು ನೋಡುವ ವ್ಯವಸ್ಥೆಗಳು ಇಂದು ಲಭ್ಯವಿದೆ. ಆದರೆ ಇದು ಸಮರ್ಪಕವಾಗಿ ಎಲ್ಲಾ ರೀತಿಯ ಮಾಹಿತಿಗಳನ್ನು ನೀಡುವಲ್ಲಿ ವಿಫಲವಾಗುವುದು ಖಂಡಿತ. ಇಂತಹ ಸನ್ನಿವೇಶದಲ್ಲಿಯೂ ಕೂಡ ಈಶಾನ್ಯ ರಾಜ್ಯಗಳ ಬಗೆಗೆ ಅಲ್ಲಿನ ಸಂಪೂರ್ಣ ಮಾಹಿತಿಗಳು ಅಂತರ್ಜಾಲದಲ್ಲಿಯೇ ದೊರಕುತ್ತದೆ. ಆದರೆ ಒಬ್ಬ ಸಹೃದಯನಿಗೆ ಅಥವಾ ಓದುಗನಿಗೆ ಮನಃಪೂರ್ವಕವಾಗಿ ಅಲ್ಲಿನ ಸ್ಥಳಗಳ ಬಗ್ಗೆ, ಅಲ್ಲಿನ ಜನಜೀವನ, ಆಚರಣೆ, ಹಬ್ಬ–ಹರಿದಿನ, ಒಟ್ಟಾರೆ ಸಂಸ್ಕೃತಿಯ ಬಗೆಗೆ ಮಾಹಿತಿ ದೊರಕಬೇಕೆಂದರೆ ಅದು ಸಾಹಿತ್ಯದ ರೂಪದಲ್ಲಿರುವ ಪ್ರವಾಸಕಥನಗಳಿಂದ ಮಾತ್ರ ಸಾಧ್ಯ. ಅಂತರ್ಜಾಲದಲ್ಲಿ ಕೇವಲ ಕೆಲವು ಪ್ರಸಿದ್ಧಿ ಪಡೆದಿರುವ ಸ್ಥಳಗಳ ಬಗ್ಗೆ ಮಾಹಿತಿ ದೊರಕುತ್ತದೆಯೇ ಹೊರತು ಅಲ್ಲಿನ ವಾಸ್ತವ ಸ್ಥಿತಿಯ ಸಂಪೂರ್ಣ ಮಾಹಿತಿ ದೊರೆಯುವುದಿಲ್ಲ. ಹಾಗಾಗಿ ಒಬ್ಬ ಲೇಖಕನು ತನ್ನ ಸೃಜನಶೀಲತೆಯಿಂದ ತಾನು ಸ್ವಯಂ ಅನುಭವಿಸಿದ ಆ ಪ್ರದೇಶದ ಸಂಪೂರ್ಣ ಮಾಹಿತಿಯನ್ನು ಸಾಹಿತ್ಯಾತ್ಮಕವಾಗಿ ಅಕ್ಷರರೂಪದ ಕೃತಿಯಲ್ಲಿ ಇಳಿಸಿ ಅದರ ಮೂಲಕ ಓದುಗನಿಗೆ ಆ ಪ್ರದೇಶದ ಸಂಪೂರ್ಣ ಮಾಹಿತಿಯನ್ನು ಒದಗಿಸುತ್ತಾನೆ. ಆಗ ಮಾತ್ರ ಓದುಗನು ಅಲ್ಲಿನ ಜನಜೀವನದ ಬಗೆಗೆ ಸಂಪೂರ್ಣ ಮಾಹಿತಿಯನ್ನು ಪಡೆಯುವಲ್ಲಿ ಯಶಸ್ವಿಯಾಗುತ್ತಾನೆ. ಅದನ್ನು ಬಿಟ್ಟು ಕೇವಲ ಅಂತರ್ಜಾಲದ ಮಾಹಿತಿಗಷ್ಟೇ ಸೀಮಿತವಾಗಿದ್ದರೆ; ಅವನು ಇತರ ಕೆಲವು

ಅಂಶಗಳನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಹಾಗಾಗಿ ಅಂತರ್ಜಾಲದ ಮಾಹಿತಿಯ ಜೊತೆಗೆ ಲೇಖಕರ ಅನುಭವಗಳನ್ನು ಬೆರೆಸಿ ತಿಳಿದಾಗ ಮಾತ್ರ ಅದು ಸಾರ್ಥಕವಾಗುತ್ತದೆ.

ಹಾಗೆಯೇ ಈಶಾನ್ಯ ರಾಜ್ಯಗಳ ಬಗೆಗೆ ಹೆಚ್ಚು ಭಾಗ ಅಂತರ್ಜಾಲದಲ್ಲಿ ಲಭ್ಯವಿದ್ದರೂ ಕೂಡ ಅಲ್ಲಿ ಪ್ರಾಕೃತಿಕ ಸೌಂದರ್ಯ ಹಾಗೂ ಬುಡಕಟ್ಟುಗಳ ವಿಭಿನ್ನ ವಿಶೇಷವಾದ ಸಂಸ್ಕೃತಿಗಳನ್ನು ತಿಳಿಯಬೇಕಾದರೆ ಅದು ಪ್ರವಾಸಕಥನಗಳಿಂದ ಮಾತ್ರ ಸಾಧ್ಯ. ಈ ಪ್ರವಾಸ ಕಥನಗಳನ್ನು ರಚಿಸಿರುವ ಲೇಖಕರು ಕೆಲವು ಸಂದರ್ಭಗಳಲ್ಲಿ ಸ್ಥಳಗಳನ್ನು ಪತ್ತೆ ಹಚ್ಚಲು, ಆ ಸ್ಥಳಗಳ ಬಗ್ಗೆ ಕೆಲವು ಮಾಹಿತಿಗಳನ್ನು ಕಲೆ ಹಾಕಲು ಅಂತರ್ಜಾಲದ ಮೊರೆ ಹೋಗಿರುವುದನ್ನು ತಾವೇ ದಾಖಲಿಸಿದ್ದಾರೆ. ಆದರೆ ಅವರು ಅಷ್ಟಕ್ಕೇ ಸೀಮಿತವಾಗಿರದೇ ಮುಂದುವರಿದು ಅಲ್ಲಿನ ಸ್ಥಳೀಯರಿಂದಲೂ ಕೂಡ ಮಾಹಿತಿಗಳನ್ನು ಕಲೆಹಾಕಿ ತಮ್ಮ ಸ್ವಾನುಭವವಗಳನ್ನು ಬೆರೆಸಿ ದಾಖಲಿಸಿರುವುದು ಮುಖ್ಯವಾಗಿ ಕಂಡುಬರುತ್ತದೆ. ಇದರಿಂದಲೂ ಕೂಡ ನಮಗೆ ಸಂಪೂರ್ಣ ಮಾಹಿತಿಗಳು ದೊರಕದಿದ್ದರೂ ಕೂಡ ಲೇಖಕನ ನೆನಪಿನ ಅಂಗಳದಲ್ಲಿ ಉಳಿಯುವಂತಹ ವಿಚಾರಗಳ ಬಗ್ಗೆ ಅವರ ಮನೋಭಾವಗಳ ಬಗ್ಗೆ ಆ ಪ್ರದೇಶದಲ್ಲಿರುವ ನೋವುಗಳಿಗೆ ಅವರು ಸ್ಪಂದಿಸುವ ರೀತಿ ಅವರ ಬರಹಗಳಿಂದಲೇ ಕಾಣಿಸುತ್ತದೆ.

ಇಂತಹ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಪ್ರವಾಸಕಥನವು ಸಾಂಸ್ಕೃತಿಕ ಪಠ್ಯವಾಗಿ ನಿಲ್ಲಬೇಕೆಂದರೆ ಅದು ಆ ಕೃತಿಯ ಲೇಖಕನಿಂದ ಮಾತ್ರ ಸಾಧ್ಯ. ಅವನು ಯಾವ ಮಟ್ಟದಲ್ಲಿ ಸಹೃದಯನನ್ನು ತನ್ನ ಕೃತಿಯ ಓದಿನತ್ತ ಸೆಳೆಯುತ್ತಾನೋ ಅದರಿಂದಷ್ಟೇ ಮಾಹಿತಿ ತಂತ್ರಜ್ಞಾನದ ವಿರುದ್ಧ ಸಾಹಿತ್ಯ ಕೃತಿಯಾಗಿ ಪ್ರವಾಸ ಕಥನಗಳು ಅಲ್ಲಿನ ಸಾಂಸ್ಕೃತಿಕ ಅಂಶಗಳನ್ನು ಹೊತ್ತುನಿಂತು ಪ್ರಸಿದ್ಧಿಯನ್ನು ಪಡೆಯುತ್ತವೆ. ನಾವು ಸಂಸ್ಕೃತಿ ಎಂದರೇನು ? ಎಂಬುದನ್ನು ತಿಳಿದರೆ ಈ ಈಶಾನ್ಯ ರಾಜ್ಯದ ಪ್ರವಾಸಕಥನಗಳು ಸಾಂಸ್ಕೃತಿಕವಾಗಿ ಹೇಗೆ ಮಾಹಿತಿ ತಂತ್ರಜ್ಞಾನ ಯುಗದಲ್ಲೂ ನಮಗೆ ಪ್ರಮುಖವೆನಿಸುತ್ತವೆ ಎಂಬುದು ತಿಳಿಯುತ್ತದೆ.

ಒಟ್ಟಾರೆಯಾಗಿ ನೋಡುವುದಾದರೆ ಮುಂದುವರೆಯುತ್ತಿರುವ ಈ ಆಧುನಿಕ ತಂತ್ರಜ್ಞಾನ ಯುಗದಲ್ಲಿಯೂ ಕೂಡ ಒಬ್ಬ ಓದುಗನಿಗೆ ಒಂದು ಪ್ರದೇಶದಲ್ಲಿರುವ ಸಂಸ್ಕೃತಿಯನ್ನು ಕಟ್ಟಿಕೊಡುವ ಕೆಲಸವನ್ನು ಬರವಣಿಗೆಯು ಸಕ್ರಿಯವಾಗಿ ನಿರ್ವಹಿಸುತ್ತಿದೆ. ಅದರಲ್ಲಿಯೂ ಪ್ರವಾಸ ಕಥನಗಳಂತೂ ಈ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಮುಖ್ಯವಾದ ತಳಹದಿಯಿಂದ ನಿಲ್ಲಬೇಕೆಂದರೆ ಆ ಕೃತಿಯ ಕರ್ತೃವಿನ ಕೈಯಲ್ಲಿ ನಿಂತಿರುತ್ತದೆ. ಒಂದು ಪ್ರದೇಶದ ಸಂಪೂರ್ಣವಾದ ಚಿತ್ರಣಗಳ ಜೊತೆಗೆ ಎಲ್ಲಾ ಮಾಹಿತಿಗಳೂ ಇಂದು ಅಂತರ್ಜಾಲದಲ್ಲಿ ಲಭ್ಯವಿದೆ ಹಾಗಾಗಿ ಪ್ರವಾಸ ಕಥನಗಳು ತಮ್ಮ ಸ್ಥಾನವನ್ನು ಉಳಿಸಿಕೊಂಡು ಸಾಂಸ್ಕೃತಿಕ ಪಠ್ಯವಾಗಿ ಉಳಿಯಬೇಕೆಂದರೆ ಅಲ್ಲಿರುವ ಸಾಂಸ್ಕೃತಿಕ ಅಂಶಗಳನ್ನು ಯಥಾವತ್ತಾಗಿ ವರದಿಯ ರೀತಿ ಲೇಖಕ ಚಿತ್ರಿಸದೇ ಅದಕ್ಕೆ ಸ್ವಲ್ಪ ನವರಸಗಳನ್ನು ಬೆರೆಸಿ ತನ್ನ ಅನುಭವವನ್ನು ಅಕ್ಷರ ರೂಪದಲ್ಲಿ ಇಳಿಸುವಾಗ ಅಲ್ಲಿನ ವಿವರ ಹಾಗೂ ಅಲ್ಲಿನ ಜನರ ಭಾವನೆಗಳನ್ನು ಲೇಖಕನ ಭಾವನೆಗಳನ್ನು ಹದವಾಗಿ ಬೆರೆಸಿದಾಗ ಮಾತ್ರ ಅದು ಒಂದು ಸಾಂಸ್ಕೃತಿಕ ಪಠ್ಯವಾಗಿ ನಿಲ್ಲುತ್ತದೆ. ಇಂತಹ ಹಲವು ರೀತಿಯ ಸಾಂಸ್ಕೃತಿಕ ಅಂಶಗಳನ್ನು ಮಾಹಿತಿ ತಂತ್ರಜ್ಞಾನ ಯುಗದಲ್ಲಿಯೂ ಕೂಡ ಸಶಕ್ತವಾಗಿ ಬಿಂಬಿಸುವಲ್ಲಿ ಕೆಲವು ಈಶಾನ್ಯ ರಾಜ್ಯ ಪ್ರವಾಸ ಕಥನಗಳು ಯಶಸ್ವಿಯಾಗಿ ಸಾಂಸ್ಕೃತಿಕ ಪಠ್ಯವಾಗಿ ರೂಪುಗೊಂಡಿವೆ; ಇನ್ನೂ ಕೆಲವು ಪ್ರವಾಸಕಥನಗಳು ತನ್ನಲ್ಲಿನ ಕೆಲವು ದೌರ್ಬಲ್ಯಗಳಿಂದಾಗಿ ಹಿಂದುಳಿದಿವೆ.

**ಪರಮಾರ್ಶನ ಗ್ರಂಥಗಳು**


- ಪ್ರವಾಸ ಸಾಹಿತ್ಯ – ಎನ್. ಎಸ್. ತಾರಾನಾಥ, ಶಕ್ತಿ ಪ್ರಕಾಶನ, 1990.
- ಪ್ರವಾಸ ಸಾಹಿತ್ಯ : ವಿಶ್ವಸಂಸ್ಕೃತಿಗಳು – ಡಾ॥ ಲತಾಗುತ್ತಿ, ಸಚಿನ್ ಪಬ್ಲಿಷರ್ಸ್, 2007.
- ಗೂಗಲ್, ಯೂಟ್ಯೂಬ್ ಸಹಾಯ.